ಒಪ್ಪಿಕೊಳ್ಳುವುದು ಬಿಟ್ಟು ಹೀಗೆ ಮ್ಯಾಜಿಕ್ ಅಂತೆಲ್ಲ ಏನೇನೋ ಮಾತಾಡಬಾರದು. ನೋಡಿದವರು ಹುಚ್ಚು ಅನ್ನುತ್ತಾರೆ ಆಮೇಲೆ."

"ಇಲ್ಲ ಮಾಮ್, ನಾನು ಹೇಳ್ತಿರೋದೇ ಸತ್ಯ."

ಧಡಕ್ಕನೆ ಸೋಫಾದಿಂದ ಏಳುತ್ತ ಹೇಳಿದೆ, "ಸರಿ ಹಾಗಾದರೆ, ನನ್ನ ಮನಸ್ಸನ್ನೂ ಓದು ನೋಡೋಣ."

"ರಾತ್ರಿ ಮಾತ್ರ ಆ ಶಕ್ತಿ ಇರುತ್ತದೆ ಮಾಮ್."

"ಇನ್ನೂ ಪೂರ್ತಿ ಬೆಳಕಾಗಿಲ್ಲವಲ್ಲ. ನೋಡು ನನ್ನ ಕಣ್ಣಲ್ಲಿ, ಹೇಳು ಈಗಲೇ."

"ನನ್ನ ಕೋಣೆಯ ಏಕಾಂತದಲ್ಲಿ ಮಾತ್ರ ಸಾಧ್ಯವಾಗುತ್ತದೆ ಅದು."

"ಸರಿ ನಿನ್ನ ಕೋಣೆಗೇ ಹೋಗೋಣ ನಡಿ."

"ಮಾಮ್, ಇದನ್ನು ಇಲ್ಲಿಯೇ ಬಿಟ್ಟುಬಿಡಲು ಸಾಧ್ಯವೇ?" ಮಾರ್ಕೋನ ದನಿಯಲ್ಲಿ ದೈನ್ಯವಿತ್ತು. ನಾನು ಆಗಲೇ ಅವನ ಕೋಣೆಯ ಒಳಗೆ ಹೋಗಿಯಾಗಿತ್ತು.

"ಗೆಟ್ ಇನ್ ಹಿಯರ್ ಅಟ್ ಒನ್ಸ್ ಮಾರ್ಕೋ."

ಮಾರ್ಕೋ ಗಂಟು ಮೋರೆ ಹಾಕಿಕೊಂಡೇ ಬಂದ. ಅವಮಾನದಿಂದ ಅವನ ತುಟಿಗಳು ಕಂಪಿಸುತ್ತಿದ್ದವು. ಬಂದವನೇ ನನ್ನ ಕೆನ್ನೆಗಳನ್ನು ಬೊಗಸೆಯಲ್ಲಿ ತೆಗೆದುಕೊಂಡು ಕಣ್ಣಲ್ಲಿ ಕಣ್ಣಿಟ್ಟು ನೋಡಿದ. ತನ್ನ ಹಾಸಿಗೆಯ ಮೇಲೆ ಕಣ್ಮುಚ್ಚಿ ಕುಳಿತ.

ಕಣ್ತೆರೆದಾಗ ಅವನ ಅಕ್ಷಿಗಳು ಕೆಂಡದಂತೆ ಕೆಂಪಗಾಗಿದ್ದವು. ಈ ನನ್ನ ಹೊಟ್ಟೆಯ ಕೂಸಿಗೆ ಯಾಕೆ ಹೀಗೆ ಹಿಂಸೆ ಕೊಡುತ್ತಿದ್ದೇನೆ ನಾನು ಅಂತ ಸಂಕಟವಾಯಿತು. ಇನ್ನೇನು ನಾನೇ ಸೋಲಬೇಕು ಅನ್ನುವಷ್ಟರಲ್ಲಿ ಮಾರ್ಕೋ ಮಾತನಾಡಿದ.

"ಟೋರಿ ಇನ್ನ ಬರಂಗಿಲ್ಲ. ಅವನಿಗಾಗಿ ಕಾಯಬ್ಯಾಡ. ಅವ ಹೋಗಿ ಆಯ್ತು."

"ಏನಂದೆ?"

"ಸುಹಾಸಂಗೂ ಗೊತ್ತದ ಇದು. ಅದಕ್ಕ ಅವ ಹಿಂಗ ದೂರ ಸರದಾನ."

ನನ್ನ ದವಡೆಗಳು ನನಗರಿವಿಲ್ಲದೇ ನಡುಗತೊಡಗಿದವು. ಮಾರ್ಕೋನ ಕಪಾಳಕ್ಕೆ ಒಂದು ಬೀಸಬೇಕು ಅನ್ನಿಸಿತು. ಕೈ ಏಳಲಿಲ್ಲ. ಅವನ ಕೆಂಪು ಕಣ್ಣುಗಳು ನನ್ನನ್ನು ಇರಿಯುವಂತೆ ನೋಡುತ್ತಿದ್ದವು.

ಅವನ ಕೋಣೆಯಿಂದ ಹೇಗೆ ಹೊರಗೆ ಬಂದೆನೋ ಗೊತ್ತಾಗಲಿಲ್ಲ. ಉಸಿರು ಕಟ್ಟಿದಂತಾಗುತ್ತಿತ್ತು. ಚಪ್ಪಲಿ ಮೆಟ್ಟಿ ಬಾಗಿಲು ತೆಗೆದು ಮೆಟ್ಟಿಲು ಇಳಿಯತೊಡಗಿದೆ. ಹಾಗೆ ಇಳಿಯುತ್ತಿದ್ದಾಗ ಒಳಗೆ ಕುಳಿತ ಮಾರ್ಕೋನಿಗೆ ಈ ಸದ್ದು ಹೇಗೆ ಕೇಳಿಸುತ್ತಿರಬಹುದು ಎಂಬ ವಿಚಾರ ಒಂದು ಕ್ಷಣ ನನ್ನ ಮನಸ್ಸಿನಲ್ಲಿ ಹಾದು ಹೋಯಿತು.

**ಕಾವ್ಯಾ ಕಡಮೆ**

ಉತ್ತರ ಕನ್ನಡ ಜಿಲ್ಲೆಯ ಕಡಮೆಯವರು. ಸದ್ಯ ಅಮೆರಿಕಾದ ನ್ಯೂಜೆರ್ಸಿಯಲ್ಲಿ ವಾಸ. ಪ್ರಕಟಿತ ಕೃತಿಗಳು: 'ಧ್ಯಾನಕೆ ತಾರೀಖಿನ ಹಂಗಿಲ್ಲ', 'ಜೀನ್ಸು ತೊಟ್ಟ ದೇವರು' (ಕವನ ಸಂಕಲನಗಳು), 'ಪುನರಪಿ' (ಕಾದಂಬರಿ), 'ಆಟದೊಳಗಾಟ ಮತ್ತು ಡೋರ್ ನಂಬರ್ ಎಂಟು' (ನಾಟಕಗಳು), 'ದೂರ ದೇಶವೆಂಬ ಪಕ್ಕದ ಮನೆ' (ಪ್ರಬಂಧಗಳು).